ನಮಗೆ ಯಾವ ರೀತಿ ಲಾಭ ಮಾಡಲು ಸಾಧ್ಯ?'

ಆಗ ಅವನು ಹೇಳಿದ್ದ, 'ನೀನೆಂಥ ಮಾತನಾಡುತ್ತಿದ್ದೀಯ? ತಿಂಗಳುಗಟ್ಟಳೆ ವಿದ್ಯಾಲಯದಲ್ಲಿ ಬಾಯಿ ಒಣಗಿಸಿಕೊಂಡು ಗಳಿಸಿದ ಹಣವನ್ನು ನಿನ್ನ ಕೈಯಲ್ಲಿಟ್ಟರೂ ಇಂಥ ಮಾತನ್ನು ಹೇಳುತ್ತಿದ್ದೀಯಲ್ಲ? ಈಗ ನನ್ನ ಬರವಣಿಗೆಯಿಂದ ನಿನಗೇನು ಬೇಕು? ನನ್ನ ಈ ಬರವಣಿಗೆಯ ಬಗ್ಗೆ ನಿನಗೇನು ಗೊತ್ತು?'

ಅವನು ಆವೇಶದಲ್ಲಿ ಹೇಳಿದ, 'ಸಾಹಿತ್ಯ ನನಗೆ ನಿನಗಿಂತಲೂ ಇಷ್ಟ. ನನ್ನ ನಿನ್ನ ಸಮಾಗಮದ ನಂತರ ಮಕ್ಕಳನ್ನು ಹೆತ್ತಂತೆಯೇ ಈ ಸಾಹಿತ್ಯದ ಸಮಾಗಮದಿಂದ ನನ್ನ ಪವಿತ್ರ ಆನಂದ ಜನ್ಮತಾಳುತ್ತದೆ. ಸಾಹಿತ್ಯವೇ ನನ್ನ ಸಹಧರ್ಮಿಣಿ ಅಥವಾ ನಿಜವಾದ ಹೆಂಡತಿ'.

ಅದೊಂದು ದಿನ ಅವನು ವಿದ್ಯಾಲಯದಿಂದ ಮರಳಿ ಬರುತ್ತಿದ್ದ. ರಸ್ತೆಯಲ್ಲಿ ಅವನಿಗೆ ಕಿರಣ ಭೇಟಿಯಾದ. ಕಿರಣ ಒಂದು ಕಾಲದ ಪರಮ ಹಿತೈಷಿ ಮಿತ್ರನಾಗಿದ್ದ. ಆರಂಭದಲ್ಲಿ ಅವನು ಬರವಣಿಗೆಯನ್ನು ಪ್ರಾರಂಭಿಸಿದ್ದಾಗ, ಇಬ್ಬರೂ ಒಟ್ಟಿಗೆ ಸಾಹಿತ್ಯದ ಬಗ್ಗೆ ಚರ್ಚಿಸುತ್ತಾ, ತಮ್ಮ ತಮ್ಮ ರಚನೆಗಳನ್ನು ಓದಿ ಹೇಳಿ ತಮ್ಮತಮ್ಮಲ್ಲಿಯೇ ತಪ್ಪುಗಳನ್ನು ತಿದ್ದುಪಡಿ ಮಾಡಿಕೊಳ್ಳುತ್ತಿದ್ದರು. ಕಿರಣ ಹೇಳಿದ, 'ನಿಮ್ಮ ಮಗಳು ಸಹ ಚಿಕ್ಕ ಕಥೆಗಾರ್ತಿಯಾಗುವುದಿಲ್ಲ. ಕೆಲವು ದಿನಗಳ ಹಿಂದೆ ಸಾಹಿತ್ಯದ ಸ್ಪರ್ಧೆಯಲ್ಲಿ ಅವಳ ಕಥೆಗೆ ಮೊದಲ ಬಹುಮಾನ ಬಂದಿದ್ದು, ನಿಜವಾಗಿಯೂ ಅದೊಂದು ಉಚ್ಚ ಮಟ್ಟದ ಕಥೆಯಾಗಿತ್ತು. ಅವಳು ಎಷ್ಟು ಸೊಗಸಾಗಿ ಪಾತ್ರಗಳು, ಆ ಪಾತ್ರಗಳ ಗುಣಾವಗುಣಗಳನ್ನು ಚಿತ್ರಿಸುತ್ತಾ ಆ ಕಥೆಯನ್ನು ಬರೆದಿದ್ದಳು. ಇಷ್ಟು ಚಿಕ್ಕ ವಯಸ್ಸಿನಲ್ಲಿ ಇಂಥ ಕಥೆಯನ್ನು ಬರೆದಿದ್ದಾಳೆಂದರೆ ನಂಬವುದು ಕಷ್ಟವಾಗುತ್ತಿತ್ತು....ನೀವೇ ಆ ಕಥೆಯನ್ನು ಬರೆದಿಲ್ಲ ತಾನೇ ಎಂದು ನನಗೆ ಅನುಮಾನವಾಗಿತ್ತು'.

'ನಾನ್ಯಾಕೆ ಈ ಜಂಜಾಟದಲ್ಲಿ ಬೀಳಲಿ! ನನ್ನ ಮಕ್ಕಳು ಸಾಹಿತ್ಯದ ಬರವಣಿಗೆಯಲ್ಲಿ ಖಂಡಿತ ತೊಡಗಿಸಿಕೊಳ್ಳಬಾರದು ಎಂಬುದು ನನ್ನಾಸೆ'. ಎಂದ ಅವನು.

'ನೀವೇನೇ ಹೇಳಿ, ಅವಳ ಬರವಣಿಗೆ ಉಚ್ಚ ಮಟ್ಟದ್ದು. ಆ ಸ್ಪರ್ಧೆಗೆ ನಾನೂ ಒಬ್ಬ ತೀರ್ಪುಗಾರನಾಗಿದ್ದೆ. ನಾನು ಆ ಕಥೆಯನ್ನು ಅನೇಕ ಬಾರಿ ಓದಿದೆ, ಮನಸ್ಸಿನಲ್ಲಿ ಅವಳ ಬರವಣಿಗೆಯ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದೆ. ಒಬ್ಬ ಪ್ರಾಮಾಣಿಕ ವ್ಯಕ್ತಿ ವರ್ತಮಾನದಲ್ಲಿ ಎಷ್ಟು ತುಚ್ಛನಾಗಿ ಪರಿಗಣಿಸಲ್ಪಡುತ್ತಾನೆ, ಅವನ ಮನೆಯೊಳಗೇ ಅವನ ಅಭಿಪ್ರಾಯಗಳು ಇತರರೊಂದಿಗೆ ಹೊಂದಾಣಿಕೆಯಾಗುವುದಿಲ್ಲ, ಕುಟುಂಬದ ಜನ ಅವನ ಬಗ್ಗೆ ಯಾವ ರೀತಿಯಲ್ಲಿ ದಂಗೆ ಏಳುತ್ತಾರೆ, ಇದರಿಂದಾಗಿ ಅವನ ಮನೆಯಲ್ಲಿ ಅಶಾಂತಿ ಮನೆ ಮಾಡುತ್ತದೆ; ತನ್ನ ಆತ್ಮಾಭಿಮಾನವನ್ನು ರಕ್ಷಣೆ ಮಾಡಿ ಕೊಳ್ಳುವ ದಿಕ್ಕಿನಲ್ಲಿ ಸಾಗಿದಾಗಲೂ ಅವನು ಎಲ್ಲರ ದೃಷ್ಟಿಯಲ್ಲಿ ನಿರರ್ಥಕನಾಗುತ್ತಾನೆ ಎಂಬ ಬಗ್ಗೆ ಘಟನೆಗಳನ್ನು ಹೆಣೆಯುತ್ತಾ ಬಹು ಸುಂದರವಾಗಿ ಕಥೆಯನ್ನು ರಚಿಸಲಾಗಿದೆ. ಈ ಕಥೆಯನ್ನು ಓದಿ ನಾನು ದಂಗಾದೆ. ಸ್ಪರ್ಧೆ ಮುಗಿದ ನಂತರ ನಾನು ಅವಳನ್ನು ಸಮೀಪಕ್ಕೆ ಕರೆದು ಅವಳನ್ನು ತುಂಬಾ ಪ್ರಶಂಸಿಸಿದೆ, ನೀವೂ ಅವಳ ಕಥೆಯನ್ನು ತರಿಸಿಕೊಂಡು ಒಮ್ಮೆ ಓದಿ'.

ಅವನು ಕಿರಣನ ಮಾತು ಕೇಳಿ ವ್ಯಗ್ರನಾದ. ಈಗ ಅವನಿಗೆ ತಾನೇ ಬರೆದ ಕಥೆ ನೆನಪಾಗುತ್ತಿತ್ತು. ಅವನು ಕೂಡಲೇ ಕೇಳಿದ, 'ಆ ಕಥೆಯ ಶೀರ್ಷಿಕೆ ಏನಾಗಿತ್ತು? ಕಥೆಯ ಶೀರ್ಷಿಕೆ?' ಕಿರಣ ಕ್ಷಣಕಾಲ ಯೋಚಿಸಿ ಹೇಳಿದ, ಹೂಂ, ನೆನಪಾಯಿತು. ಅದರ ಶೀರ್ಷಿಕೆ ನಿರರ್ಥಕ ವ್ಯಕ್ತಿ ಎಂದಾಗಿತ್ತು.

ಅವಳು ಏನೇನು ಬರೆಯುತ್ತಾಳೆಂದು ಈಚೆಗೆ ನಾನು ಗಮನವನ್ನು ಕೊಡುವುದಿಲ್ಲ ಎಂದ ಅವನು.

ಕಿರಣ ಮತ್ತೆ ಹೇಳಿದ, 'ನಾನು ಆಗ ಅವಳಿಗೆ, ನಾನೂ ಒಬ್ಬ ಲೇಖಕ, ಇಷ್ಟು ವಾಸ್ತವಿಕ ಯಥಾರ್ಥದ ಕಥೆಯನ್ನು ಕಲ್ಪನೆ ಮಾತ್ರದಿಂದ ಬರೆಯಲು ಸಾಧ್ಯವಿಲ್ಲ. ಈ ಕಥೆಯನ್ನು ನೀನೆಲ್ಲಿಯೋ ನೋಡಿ ಬರೆದಿದ್ದೀಯ ಎಂದು ನನಗೆ ಅನ್ನಿಸುತ್ತದೆ. ಸರಿ ಹೇಳು, ನೀನು ಯಾರನ್ನು ನೋಡಿ ಬರೆದಿದ್ದೀಯಾ...ನನ್ನ ಪ್ರಶ್ನೆಗೆ ಅವಳು ಹಿಂಜರಿಯದೆ ಏನು ಹೇಳಿದಳೆಂದು ನೀನು ತಿಳಿಯಬೇಕೆಂದಿದ್ದೀಯಾ?'

'ಏನು ಹೇಳಿದಳು?' ಅವನು ಕೇಳಿದ.

ಅವಳು, 'ಬೇರೆ ಯಾರನ್ನು ನೋಡಿ ಬರೆಯಲಿ!...ನನ್ನ ತಂದೆಯವರನ್ನೇ ನೋಡಿ ಬರೆದೆ' ಎಂದಳು.

ಕಿರಣನ ಬಾಯಿಯಿಂದ ಈ ಮಾತು ಕೇಳಿ ಅವನು ವಿಚಲಿತಗೊಂಡು ಅವನನ್ನೇ ಏವೆಯಿಕ್ಕದೆ ನೋಡಿದ.

ಮನೆಗೆ ಬಂದು ಅವನು ಮಗಳನ್ನು ಕರೆದು ಕೇಳಿದ, 'ನೀನು ಅವತ್ತು ಬಹುಮಾನ ಪಡೆದೆಯಲ್ಲ, ಆ ಕಥೆ ಎಲ್ಲಿದೆ? ನನಗೆ ತಂದು ತೋರಿಸು'

'ಆ ಕಥೆ ಈಗ ನಿಮಗೇಕೆ ಬೇಕು?' ಮಗಳು ಪ್ರಶ್ನಿಸಿದಳು.

'ಬೇಕು! ನೀನು ನನ್ನನ್ನೇ ನೋಡಿ ಆ ಕಥೆಯನ್ನು ಬರೆದಿದ್ದೀಯ ಅಂತ ಹೇಳಿದ್ದೆಯಲ್ಲ! ನಿನಗೆ ನಾನಿಷ್ಟು ನಿರರ್ಥಕ ಮನುಷ್ಯನಾದೆನೇ? ಹೇಳು! ನಾನು ಕಥೆಯಲ್ಲಿರುವ ಪಾತ್ರದಂತೆಯೇ ನಿರರ್ಥಕ ಮತ್ತು ತುಚ್ಛ ಮನುಷ್ಯನೇ?'

ಅವನ ಹೆಂಡತಿ ಅವನ ಬಳಿಗೆ ಬಂದು ನಗುತ್ತಾ ಹೇಳಿದಳು, 'ಇವಳನ್ನು ಏನು ಕೇಳುತ್ತಿದ್ದೀರಿ, ನನ್ನನ್ನು ಈ ಬಗ್ಗೆ ಕೇಳಬಾರದೇ? ನಾನು ನಿಮಗೆಲ್ಲವನ್ನೂ ವಿಸ್ತಾರವಾಗಿ ಹೇಳುತ್ತೇನೆ.'

ಹೆಂಡತಿಯ ಮಾತು ಕೇಳಿ ಅವನೊಂದು ಕ್ಷಣ ಭಾವನಾಹೀನನಾದ. ಅವಳ ಈ ಹೇಳಿಕೆಯನ್ನು ವಿರೋಧಿಸುವಂಥ ಶಬ್ದವನ್ನು ಅಳೆಯುತ್ತಾ ಮೆಲ್ಲನೆ ಹೇಳಿದ, 'ನಾನೀಗ ನನ್ನ ಮಗಳೊಂದಿಗೆ ಮಾತನಾಡುತ್ತಿದ್ದೇನೆ, ನಿನ್ನೊಂದಿಗಲ್ಲ!'

ಬಹುಶಃ ಹೆಂಡತಿ ಸಹ ಮಧ್ಯೆ ಮತ್ತೆ ಬಾಯಿ ಹಾಕಲು ಇಷ್ಟಪಡದೆ ಒಲೆಯ ಬಳಿಗೆ ಹೋದಳು. ಅವನು ಮಗಳ ಗದ್ದವನ್ನು ಮೇಲೆತ್ತಿ ಮೆಲ್ಲನೆ ಕೇಳಿದ, 'ಮಗಳೇ, ನಾನು ಅಂಥ ತುಚ್ಛನಂತೆ ತೋರುತ್ತೇನೆಯೇ?' ಮಗಳು ಯಾವುದೇ ಉತ್ತರವನ್ನು ಕೊಡಲಿಲ್ಲ. ಅವನು ಇದೇ ಪ್ರಶ್ನೆಯನ್ನು ಪದೇ ಪದೇ ಕೇಳಿದ. ಕಡೆಗೆ ಮಗಳು ತಲೆ ತಗ್ಗಿಸಿ ನೆಲವನ್ನು ನೋಡುತ್ತಾ ಹೌದೆಂಬಂತೆ ತಲೆಯಾಡಿಸಿದಳು.

ಮಗಳ ಈ ಸಂಜ್ಞೆಯನ್ನು ಅರಿತುಕೊಂಡ ಅವನು ಒಳಗೊಳಗೇ ಕರಗುತ್ತಾ ಹೋದ. ಕಡೆಗೆ ಒತ್ತಿ ಬಂದ ಕಂಠದಲ್ಲಿ ಮತ್ತೆ ಕೇಳಿದ, 'ನಿನಗೆ ಹೀಗೇಕೆ ಅನ್ನಿಸುತ್ತದೆ?' ಮಗಳು ಧೈರ್ಯವನ್ನು ಒಟ್ಟು ಮಾಡಿಕೊಂಡು ತಂದೆಯ ಕಣ್ಣುಗಳಲ್ಲಿ ತನ್ನ ಕಣ್ಣುಗಳನ್ನು ಬೆಸೆಯುತ್ತಾ ಹೇಳಿದಳು, 'ನಿಜ ಹೇಳಲೇ, ಅಪ್ಪಾ? ನೀವು ಕೋಪಿಸಿಕೊಳ್ಳುವುದಿಲ್ಲ ತಾನೇ? ನಾನೇಕೆ ಕೋಪಿಸಿಕೊಳ್ಳಲಿ! ಹೇಳು?'

'ನಾವು ಇದುವರೆಗೆ ನಿಮ್ಮಂದ ತಂದೆ ಎಂಬ ಭಾವನೆಯನ್ನೇ ಅನುಭವಿಸಲಿಲ್ಲ. ನೀವು ಸದಾ ಮನೆ ಮತ್ತು ಕುಟುಂಬದ ಆತ್ಮೀಯತೆಯಿಂದ ನಮ್ಮ ಅಗತ್ಯಗಳನ್ನು ದೂರವಿಟ್ಟು ನೀವು ಪುಸ್ತಕಗಳಲ್ಲಿ ಅಥವಾ ನಿಮ್ಮ ಬರವಣಿಗೆಯಲ್ಲಿ ಮುಳುಗಿರುತ್ತೀರಿ, ಹೀಗಾಗಿ ಮಕ್ಕಳಾದ ನಾವು ಅಮ್ಮನ ಹತ್ತಿರ ಇದೇ ವಿಷಯದ ಬಗ್ಗೆ ಮಾತನಾಡುತ್ತಿರುತ್ತೇವೆ. ಸಂಜೆ ನೀವು ಮನೆಗೆ ಬಂದಾಗ, ತಂದೆಯಲ್ಲ, ಒಬ್ಬ ಲೇಖಕ ಮನೆಗೆ ಬಂದ ಎಂದು ನಮಗೆ ಅನ್ನಿಸುತ್ತದೆ.'

ಮಗಳ ಮಾತನ್ನು ವಿರೋಧಿಸುವ ಶಕ್ತಿ ಅವನಿಗಿರಲಿಲ್ಲ. ಹೀಗಾಗಿ ಅವನು ಒಬ್ಬ ಮಹಾನ್ ದಾರ್ಶನಿಕನಂತೆ ಗಂಭೀರ ಸ್ವರದಲ್ಲಿ ಹೇಳಿದ, 'ಇದು ಹೀಗೆಯೇ ಮಗಳೇ, ದೀಪದ ಕೆಳಗೆ ಕತ್ತಲಿರುತ್ತದೆ. ನಾನಿರುವಂತೆ ಈ ಮನೆ ಯಲ್ಲಿ ಎಷ್ಟು ಕತ್ತಲು ಆವರಿಸುತ್ತದೆ ಎಂಬುದನ್ನು ಸ್ವತಃ ನಾನೂ ಅನುಭವಿಸಿದ್ದೇನೆ.'

ಇದಕ್ಕೆ ಮಗಳು ತಕ್ಷಣ ಉತ್ತರಿಸಿದಳು, 'ಆದರೆ ಅಪ್ಪಾ! ನಾನು ನಿಮಗೊಂದು ವಿಷಯ ಹೇಳಲು ಬಯಸುತ್ತೇನೆ. ವ್ಯಾವಹಾರಿಕವಾಗಿ ಬದಲಾಗುವವರು ಮೌನವಾಗಿ ತಾವೇ ಕೆಲಸ ಕಾರ್ಯಗಳಲ್ಲಿ ತೊಡಗುತ್ತಾರೆ ಎಂಬುದನ್ನು ನಾನು ಈ ವಯಸ್ಸಿನಲ್ಲೂ ಅರ್ಥ ಮಾಡಿಕೊಂಡಿದ್ದೇನೆ. ಆದರೆ ಯಾರು ವ್ಯಾವಹಾರಿಕವಾಗಿದ್ದುಕೊಂಡು ಅದರಂತೆ ಸಾಗುವುದಿಲ್ಲವೋ ಅವರು ಅನೇಕ ರೀತಿಯ ಕೊಟೇಶನ್ ಒಟ್ಟು ಮಾಡಿ ಜಪ ಮಾಡುತ್ತಿರುತ್ತಾರೆ, ದರ್ಶನ ಶಾಸ್ತ್ರದ ಬಗ್ಗೆ ತಮ್ಮ ಪಾಂಡಿತ್ಯವನ್ನು ಪ್ರದರ್ಶಿಸಲು....ನೀವು ಸಹ ನಿತ್ಯ ಕಥೆಯಲ್ಲಿಯೇ ಮುಳುಗಿ ಕಲ್ಪನೆಯಲ್ಲಿ ಹಾರಾಡುತ್ತಿರುತ್ತೀರ; ನಿಮ್ಮ ಜೀವನವನ್ನೂ ಕಲ್ಪನೆಯ ಕಣ್ಣುಗಳಿಂದ ನೋಡುತ್ತೀರ. ವ್ಯಾವಹಾರಿಕ ದೃಷ್ಟಿಯಿಂದ ಎಂದೂ ನೋಡುವುದಿಲ್ಲ. ಬಹುಶಃ ನನ್ನ ಮೇಲೆ ನಿಮ್ಮ ಪ್ರಭಾವವಿರಬಹುದು. ನನಗೂ ಚಿಕ್ಕ ವಯಸ್ಸಿನಲ್ಲಿಯೇ ನಿಮ್ಮ ಹಾಗೆ ಬರೆಯುವ ಆಸೆಯಾಗುತ್ತಿತ್ತು. ಅದಕ್ಕೇ ಆಗಾಗ ಬರೆಯುತ್ತಿದ್ದೆ. ಆದರೆ ನನಗೆ ವಯಸ್ಸಾದಂತೆ ನಿಮ್ಮನ್ನು ಮತ್ತು ನಿಮ್ಮ ಬರವಣಿಗೆಯ ಬದುಕನ್ನೂ ನೋಡುತ್ತಿದ್ದೆ. ಒಬ್ಬ ಲೇಖಕ ಎಷ್ಟು ಶ್ರೇಷ್ಠ ಮತ್ತು ಅಮೂಲ್ಯ ಎಂಬುದನ್ನು